ಕಾಯುತ್ತಿದ್ದೆ. ಬೆಳಗ್ಗೆ ಹಟ್ಟಿಯಿಂದ ಬಿಟ್ಟಾಗ ರೌಡಿ ಬಾತು ಕುಂಡೆ ಅಲ್ಲಾಡಿಸಿಕೊಂಡು ಹೊರಟಿತ್ತು. ಸುತ್ತಮುತ್ತ ಯಾರೂ ಇಲ್ಲದ್ದು ಖಾತ್ರಿಮಾಡಿಕೊಂಡು ಅದರ ಅಂಡಿಗೊಮ್ಮೆ ಬಿಗಿಯಾಗಿ ಝಾಡಿಸಿ ಒದ್ದೆ. ಮೂಟೆಯಂತೆ ಉರುಳಿಕೊಂಡು ಹೋಗಿ ಬಿದ್ದು ಕ್ವೊರ್ರರ್ರೋ... ಪಾತ್... ಪಾತ್ ಎಂದಿತು. ಈ ಬದ್ಮಾಶ್ ಬಾತಿಗೆ ಹೀಗೆ ಬಾರಿಸಲು ಇದೊಂದೇ ಕಾರಣವಲ್ಲದೆ ಹಳೆಯ ದ್ವೇಷಗಳೂ ಬಾಕಿ ಉಳಿದಿದ್ದವು.

ನೋಡಲು ಅಮಾಯಕವಾಗಿ ಕಾಣುವ ಬಾತುಗಳು ನಾವಂದುಕೊಂಡಷ್ಟು ಶಾಂತ ಜೀವಗಳಲ್ಲ. ಒಂದು ಸಲವಂತೂ ನನ್ನ ಬೆರಳಿನ ಚರ್ಮ ಹಿಸುಕಿ ಹೋಗುವಂತೆ ಜೋರಾಗಿ ಕಚ್ಚಿ ಎಳೆದಿದ್ದವು. ಚಮಚದಂತಿರುವ ಅವುಗಳ ಕೊಕ್ಕಿನ ಕೆಳಗೆ ಸಣ್ಣ ಹಲ್ಲುಗಳಿರುವ ವಿಷಯ ನನಗೆ ಗೊತ್ತೇ ಇರಲಿಲ್ಲ. 'ಕೋಳಿ ಬಾಯಾಗೆ ಹಲ್ಲಿಲ್ಲ' ಎಂದು ಕೇಳಲ್ಪಟ್ಟಿದ್ದ ನಾನು ಅದನ್ನು ಬಾತುಗಳಿಗೂ ವಿಸ್ತರಿಸಿಕೊಂಡಿದ್ದೆ. ಯಾವಾಗ ಕಟಿಂಗ್ ಪ್ಲೇಯರ್ ಥರದ ತನ್ನ ಕೊಕ್ಕಿನಿಂದ ಬೆರಳಿನ ಚರ್ಮ ಹಿಡಿದು ಹಿಂಜಾಡಿತೋ ಆಗಾಲೇ ಅವುಗಳ ಆಕ್ರಮಣ ಸ್ವರೂಪ ಅರ್ಥವಾದದ್ದು. ತಮ್ಮ ಮರಿಗಳ ಯಾರಾದರೂ ಮುಟ್ಟಲು ಬಂದರೆ ತಾಯಿಕೋಳಿಗಳೂ ಅಟ್ಟಿಸಿಕೊಂಡು ಬರುತ್ತವಾದರೂ ಬಾತಿನಷ್ಟು ಅವು ಉಗ್ರಗಾಮಿಗಳಲ್ಲ. ಬಾತು ಮಾತ್ರ ರೊಚ್ಚು ಹಿಡಿದು, ಅಂಡು ಅಲ್ಲಾಡಿಸಿಕೊಂಡು ಬಂದು ಕಚ್ಚೇ ಬಿಡುತ್ತದೆ.

ಕೋಳಿಯ ಮನೆಯನ್ನು ಶುಚಿಗೊಳಿಸುವುದು ಸುಲಭ. ಮರಳು, ಇಲ್ಲವೇ ಭತ್ತದ ಹೊಟ್ಟನ್ನು ಪ್ಲಾಸ್ಟಿಕ್ ಚೀಲದ ಮೇಲೆ ಹರಡಿ ಕುಕ್ಕೆ ಮುಚ್ಚಿದರೆ ಮುಗಿಯಿತು. ಬೆಳಗ್ಗೆ ಎದ್ದು ಚೀಲ ಮಡಚಿಕೊಂಡು ಹೋಗಿ ಕೊಡವಿ ತೊಳೆದರೆ ಕಥೆ ಮುಗಿಯುತ್ತದೆ. ಆದರೆ ಬಾತುಗಳ ಕಥೆ ಹಾಗಲ್ಲ. ಎಂಥ ಹಾಸಿಗೆ ಹಾಸಿದರೂ ಅವು ಎಳೆದಾಡಿ ರಂಪ ಮಾಡಿರುತ್ತಿದ್ದವು. ಕೆಳಗಿದ್ದ ಕೆಂಪು ಗಾರೆ ನೆಲದ ಮೇಲೆ ತಮ್ಮ ವಿಸರ್ಜನೆಯನ್ನು ತೆಳ್ಳಗೆ ಆಮ್ಲೇಟಿನಂತೆ ಹಾಕಿರುತ್ತಿದ್ದವು. ತಮ್ಮ ಚಪ್ಪಟೆ ಕಾಲುಗಳಿಂದ ಪಚಪಚ ಅದರ ಮೇಲೆಲ್ಲಾ ಓಡಾಡಿ ರಾಡಿ ಎಬ್ಬಿಸಿರುತ್ತಿದ್ದವು. ಕೆಸರಲ್ಲಿ ಅಂಟಿನಂಥ ಜಿಗುಟಾದ ಅದ್ಯಾವ ತಿಂಡಿ ತಿಂದಿರುತ್ತಿದ್ದವೋ ಏನೋ ಅವುಗಳ ಪ್ರಸಾದ ನೆಲಕ್ಕೆ ಬಿದ್ದ ಕೂಡಲೇ ಬಿಗಿಯಾಗಿ ಅಂಟಿಕೊಳ್ಳುತ್ತಿತ್ತು. ಇದನ್ನು ಪುಸ್ತಕಗಳಿಗೆ ಹಚ್ಚುವ ಅಂಟಾಗಿ ಯಾಕೆ ಉಪಯೋಗಿಸಬಾರದು ಎಂದು ಕೂಡ ನಾನು ಗಂಭೀರವಾಗಿ ಯೋಚಿಸಿದ್ದಿದೆ. ಚುಂಚಕದಂಥ ಚೂಪು ಸಾಧನದಿಂದ ಕೆರೆಕೆರೆದು ಆ ಮ್ಯಾಣವನ್ನು ಕ್ಲೀನ್ ಮಾಡಬೇಕಿತ್ತು. ಈ ಅನುಭವವೇ ನನಗೆ ಹೊಸದು. ನನ್ನ ಕಕ್ಕವನ್ನೇ ನೆಟ್ಟಗೆ ತೊಳೆದುಕೊಳ್ಳಲು ಬಾರದ ವಯಸ್ಸಿನಲ್ಲಿದ್ದ ನಾನು ಆ ಬಾತುಗಳ ದುರ್ನಾತದ ಗೊಬ್ಬರವನ್ನು ಹೆಕ್ಕಿ ತೆಗೆಯಬೇಕಿತ್ತು. ಒಂದು ಒಳ್ಳೆಯ ಉಚ್ಛಿಷ್ಠವನ್ನೂ ಜೀವನ ಶೈಲಿಯಾಗಿ ಅಳವಡಿಸಿಕೊಳ್ಳದ ಈ ಬಾತುಗಳ ಮೇಲೆ ನನಗೆ ಆಗಿನಿಂದಲೂ ಬೇಸರವಿತ್ತು.

ಆದರೆ, ಅದೇ ಬಾತುಗಳು ನೀರು ನಿಂತ ಹೊಂಡದಲ್ಲಿ ಇಳಿದು ಸರಾಗವಾಗಿ ಚಲಿಸುವಾಗ ಖುಷಿಯಾಗುತ್ತಿತ್ತು. ಸಣ್ಣಮಕ್ಕಳು ಕಾರನ್ನು ಚಲಾಯಿಸುವಂತೆ ರೆಕ್ಕೆಯಂಥ ಪಾದಗಳನ್ನು ಹದವಾಗಿ ತಳ್ಳಿಕೊಂಡು ಸದ್ದಿಲ್ಲದೆ ತೇಲುವುದು ರೋಮಾಂಚಕವೆನಿಸುತ್ತಿತ್ತು. ನೀರೊಳಗೆ ಮುಳುಮುಳುಗಿ ಎದ್ದು ತಲೆ ಕೊಡವಿದಾಗ ಅವುಗಳ ಬಗ್ಗೆ ಪ್ರೀತಿ ಉಕ್ಕುತ್ತಿತ್ತು. ರೆಕ್ಕೆ ಮೇಲೆ ಬಿದ್ದ ನೀರು ಪಾದರಸದಂತೆ ಇಳಿದು ಹೋಗುವ ದೃಶ್ಯ ಸಂಭ್ರಮವೆನಿಸುತ್ತಿತ್ತು. ನೀರಿನಲ್ಲೇ ಬಿದ್ದು ಒದ್ದಾಡಿದರೂ ಒಮ್ಮೆಯೂ ನೆನೆಯದ ಅವುಗಳ ಹೊಳಪಿನ ಪುಕ್ಕಗಳ ಮೈ ಇಷ್ಟವಾಗುತ್ತಿತ್ತು. ನನ್ನ ಪರಮವೈರಿ ಗಂಡು ಬಾತಿನ ರೆಕ್ಕೆಗಳ ಕಡುನೀಲಿ ಬಣ್ಣವಂತೂ ಆಹಾ! ಚೆಂದವೋ ಚಂದ.

ಜೀವನದಲ್ಲಿ ಒಮ್ಮೆಯೂ ಕನ್ನಡಿ ನೋಡಿಕೊಳ್ಳದ, ಪೌಡರ್, ಸ್ನೋ ಬಳಿದುಕೊಳ್ಳದ, ತಮ್ಮ